10) ಹಾಸನ	4000	420000	105	2400	1600
11) ಚಿಕ್ಕಮಗಳೂರು	2000	208000	104	1200	800
12) ದಕ್ಷಿಣ ಕನ್ನಡ	3000	309000	103	1800	1200
13) ಧಾರವಾಡ	5000	525000	105	3000	2000
14) ಉತ್ತರ ಕನ್ನಡ	2500	257500	103	1500	1000
15) ಬೆಳಗಾಂ	90000	9000000	100	54000	36000
16) ಬಿಜಾಪುರ	40000	4032000	101	24000	16000
17) ರಾಯಚೂರು	5200	560000	108	3120	2080
18) ಬಳ್ಳಾರಿ	5000	540000	108	3000	2000
19) ಗುಲ್ಬರ್ಗಾ	5000	520000	104	3000	2000
20) ಬೀದರ್	15000	1560000	104	9000	6000
ಒಟ್ಟು	253000	26336000	104	151800	101200

ವಿಷಯ :- ಹುಬ್ಬಳ್ಳಿ ನಗರದಲ್ಲಿ ಕಟ್ಟಡ ಕಟ್ಟಿಸಲು ಪರವಾನಿಗೆ ನೀಡುವ ಬಗ್ಗೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2360 (930)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ 1992 ಜನವರಿಯಿಂದ 31-7-95 ರ ತನಕ ಕಟ್ಟಡ ಕಟ್ಟಿಸುವ ಕುರಿತು ಪರವಾನಿಗೆ ಸಲುವಾಗಿ ಬಂದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು;

ಆ) ಅವುಗಳಲ್ಲಿ ಎಷ್ಟು ಅರ್ಜಿಗಳ ವಿಲೇವಾರಿ ಆಗಿದೆ.;

ಇ) ಬಾಕಿ ಅರ್ಜಿಗಳ ವಿಲೇವಾರಿ ಆಗದೆ ಇರಲು ಕಾರಣವೇನು?

ಶ್ರೀ ವೆಜಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) 4,225

ಆ) 3, 553

ಇ) ಬಾಕಿ ಅರ್ಜಿಗಳ ವಿಲೇವಾರಿ ಆಗದೇ ಇರಲು ಪ್ರಮುಖವಾದ ಕಾರಣಗಳು ಈ ಕೆಳಗಿನಂತಿವೆ :-

1.ಅಧಿಕೃತ ದಾಖಲೆಗಳನ್ನು ಅರ್ಜಿಯ ಜೊತೆ ಹಾಜರಿಪಡಿಸದೇ ಇರುವುದು.

2. ವಿನ್ಯಾಸವನ್ನು ಅಭಿವೃದ್ಧಿಗೊಳಿಸಿ ಮಹಾನಗರಸಭೆಗೆ ಹಸ್ತಾಂತರ ಮಾಡದೇ ಇರುವುದು.

3. ನಿರ್ದಿಷ್ಟವಾದ ಪ್ರಕರಣಗಳಲ್ಲಿ ಆಜೂ, ಬಾಜೂ ಆಸ್ತಿ ಮಾಲೀಕರ ಒಪ್ಪಿಗೆ ಪತ್ರ ಹಾಜರುಪಡಿಸದೇ ಇರುವುದು.

4. ಪ್ರಸ್ತಾವನೆಗಳು ನಿಯೋಜಿತ ನಕ್ಷೆಗಳ ನಿಬಂಧನೆಗೆ ವ್ಯತಿರಿಕ್ತವಾಗಿರುವುದು.

5. ಮಹಾನಗರಸಭೆಗೆ ಆಸ್ತಿ ಕರ ಬಾಕಿ ಉಳಿದಿರುವುದು.

6. ಅಭಿವೃದ್ಧಿ ಶುಲ್ಕ ತುಂಬದೆ ಇರುವುದರಿಂದ ಹಾಗೂ ತುಂಬುವಲ್ಲಿ ಅರ್ಜಿದಾರರು ತಡ ಮಾಡುವುದು.

ವಿಷಯ :- ಹುಬ್ಬಳ್ಳಿ ನಗರದಲ್ಲಿ ಕೊಳವೆ ಬಾವಿಗಳನ್ನು ಕೊರೆಯುವ ಬಗ್ಗೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2361 (2582)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ನಗರದಲ್ಲಿ ಇಲ್ಲಿಯವರೆಗೆ ಕೊರೆದ ಬಾವಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಸುಸ್ಥಿತಿಯಲ್ಲಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಸುಸ್ಥಿತಿಯಲ್ಲಿ ಇರದ ಕೊಳವೆ ಬಾವಿಗಳ ದುರಸ್ತಿಯ ಸಲುವಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಈ ವರ್ಷ ಎಷ್ಟು ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಯೋಜಿಸಲಾಗಿದೆ (ಅವುಗಳ ವಿವರ ನೀಡುವುದು)

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಹುಬ್ಬಳ್ಳಿ ನಗರದಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ- 538

ಸುಸ್ಥಿತಿಯಲ್ಲಿರುವ ಕೊಳವೆ ಬಾವಿಗಳ ಸಂಖ್ಯೆ-489

ಹುಬ್ಬಳ್ಳಿಯಲ್ಲಿ ಕೊಳವೆ ಬಾವಿಗಳನ್ನು ರೀಪೇರಿ ಮಾಡಲು 5 ಜನ ಸಿಬ್ಬಂದಿ ಹಾಗೂ 1 ವಾಹನ ಇದ್ದು, ಪ್ರತಿದಿನ ಸುಸ್ಥಿತಿಯಲ್ಲಿರದ ಕೊಳವೆ ಬಾವಿಗಳನ್ನು ರಿಪೇರಿ ಮಾಡಲಾಗುತ್ತಿದೆ.

ಆ) ಈ ವರ್ಷ 9 ಕೊಳವೆ ಬಾವಿಗಳನ್ನು ಕೊರೆಯಲು ಯೋಜಿಸಲಾಗಿದೆ.